# ಬೋಸ್ಟನ್ ಟೀ ಪಾರ್ಟಿ ಬ್ರಿಟಿಷರ ವಿರುದ್ಧದ ಕ್ರಾಂತಿಗೆ 250 ವರ್ಷ



10 ಗಂಟೆಗೆ ಸಭೆ ಸೇರಿ, ಹಡಗುಗಳು ಹೊತ್ತು ತರಲಿರುವ ಚಹಾ ಪುಡಿಯನ್ನು ನಾಶಪಡಿಸುವ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸಿದರು. ಅದು 'ಬೋಸ್ಟನ್ ಟೀ ಪಾರ್ಟಿ' ಎಂದೇ ಹೆಸರು ಪಡೆಯಿತು.

ಬೋಸ್ಟನ್ ಟೀ ಪಾರ್ಟಿ ಘಟನೆ ನಡೆದ ರಾತ್ರಿ, ಲಂಡನ್‌ನಿಂದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಚಹಾವನ್ನು ಹೊತ್ತು ಹೊರಟಿದ್ದ ಮೂರು ಹಡಗುಗಳು ಬೋಸ್ಟನ್ ಹಾರ್ಬರ್‌ನಲ್ಲಿ ಲಂಗರು ಹಾಕಿದವು. ಡಾರ್ಟ್‌ಮೌತ್ ಹೆಸರಿನ ಹಡಗು ನವೆಂಬರ್ 28, 1773ರಂದು, ಎಲೀನರ್ ಡಿಸೆಂಬರ್ 2ರಂದು ಮತ್ತು ಬೀವರ್ ಡಿಸೆಂಬರ್15ರಂದು ಬೋಸ್ಟನ್‌ಗೆ ಆಗಮಿಸಿತು. ಮೂರು ಹಡಗುಗಳಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಚಹಾದ 340 ಪೆಟ್ಟಿಗೆಗಳನ್ನು ಸಾಗಿಸಲಾಗಿತ್ತು. ಅವುಗಳಲ್ಲಿದ್ದ ಚಹಾದ ಪ್ರಮಾಣ ಸುಮಾರು 46 ಟನ್ನು.

ಸನ್ಸ್ ಆಫ್ ಲಿಬರ್ಟಿ ತಂಡದ ಸದಸ್ಯರು ಡಿಸೆಂಬರ್16, 1773ರ ರಾತ್ರಿ, ಮೂರು ಹಡಗುಗಳ ಬಾಗಿಲುಗಳನ್ನು ಕೊಡಲಿಗಳಿಂದ ಹೊಡೆದು ತೆಗೆದು, ಅಷ್ಟೂ ಪೆಟ್ಟಿಗೆಗಳಲ್ಲಿನ ಚಹಾಪುಡಿಯನ್ನು ಸಮುದ್ರಕ್ಕೆ ಸುರಿದರು. ಹೀಗೆ ನಾಶಪಡಿಸಲಾದ ಚಹಾ ಪುಡಿಯ ಅಂದಿನ ಮೌಲ್ಯ 17 ಲಕ್ಷ ಡಾಲರ್‌ಗಳೆಂದು ಅಂದಾಜಿಸಲಾಯಿತು. ಹೀಗೆ ಚಹಾ ಪುಡಿಯನ್ನು ನಾಶಪಡಿಸಿದ ಘಟನೆಯಿಂದಾಗಿ ಬ್ರಿಟಿಷರಿಗೆ ಅಪಾರ ನಷ್ಟವುಂಟಾಯಿತು. ಕೇವಲ ಚಹಾವನ್ನು ನಾಶಪಡಿಸುವುದು ಬೋಸ್ಟನ್ ಟೀ ಪಾರ್ಟಿ ಉದ್ದೇಶವಾದ್ದರಿಂದ, ಹಡಗುಗಳಿಗಾಗಲಿ ಅಥವಾ ಕ್ಯಾಪ್ಟನ್‌ಗಳ ವೈಯಕ್ತಿಕ ಸ್ವತ್ತುಗಳಿಗಾಗಲೀ ಯಾವುದೇ ಹಾನಿಯನ್ನುಂಟುಮಾಡಲಿಲ್ಲ.

ಬೋಸ್ಟನ್ ಟೀ ಪಾರ್ಟಿಯಲ್ಲಿ ಭಾಗವಹಿಸಿದವರ ಸಂಖ್ಯೆ 116 ಎಂದು ದಾಖಲೆಗಳಲ್ಲಿ ನಮೂದಿಸಲಾಗಿದೆಯಾದರೂ, ಅದಕ್ಕಿಂತ ಹೆಚ್ಚು ಮಂದಿ ಭಾಗವಹಿಸಿದ್ದರೆಂದು ಅಂದಾಜಿಸಲಾಗಿದೆ. ಅನೇಕರು ಬೋಸ್ಟನ್ ಅಥವಾ ಸುತ್ತಮುತ್ತಲಿನ ಪ್ರದೇಶದಿಂದ ಬಂದವರು. ಕೆಲವರು ಸೆಂಟ್ರಲ್ ಮೆಸಾಚುಸೆಟ್ಸ್ ಮತ್ತು 'ಮೈನೆ' (Maine) ಯಲ್ಲಿರುವ ವೋರ್ಸೆಸ್ಟರ್‌ನಷ್ಟು ದೂರದಿಂದ ಬಂದಿದ್ದರು. ಬಹುಪಾಲು ಜನರು ಇಂಗ್ಲಿಷ್ ಮೂಲದವರಾಗಿದ್ದರು. ರಿಶ್, ಸ್ಕಾಟಿಷ್, ಫ್ರೆಂಚ್, ಪೋರ್ಚುಗೀಸ್ ಮತ್ತು ಆಫ್ರಿಕನ್ ಸಂತತಿಯ ಪುರುಷರು ಕೂಡ ಭಾಗವಹಿಸಿದ್ದರೆಂದು ದಾಖಲಾಗಿದೆ.

ಬಂಧನದಿಂದ ತಪ್ಪಿಸಿಕೊಳ್ಳಲು, ಚಹಾ ನಾಶಪಡಿಸಿದ ತಕ್ಷಣ ಕೆಲವರು ಬೋಸ್ಟನ್ ನಗರವನ್ನು ತೊರೆದರು. ಶಿಕ್ಷೆಯ ಭಯದಿಂದ ಅನೇಕರು ಈ ಘಟನೆ ನಂತರ ಹಲವು ವರ್ಷ ಅನಾಮಧೇಯರಾಗಿದ್ದರಂತೆ. 'ಬೋಸ್ಟನ್ ಪಾರ್ಟಿ'ಯ ಘಟನೆ ಅಮೆರಿಕನ್ ಕ್ರಾಂತಿಗೆ ನಾಂದಿ ಹಾಡಿತು. ಪಾರ್ಟಿಯಲ್ಲಿದ್ದವರ ರಹಸ್ಯ ಅವರ ಸಾವಿನೊಂದಿಗೆ ಸಮಾಧಿಯಾಯಿತು.

## ಹಡಗುಗಳು ಮತ್ತು ವಸ್ತುಸಂಗ್ರಹಾಲಯ

ಬೋಸ್ಟನ್ ನಗರದ ಕಾಂಗ್ರೆಸ್ ಸ್ಟ್ರೀಟ್ ಸೇತುವೆಯಲ್ಲಿರುವ ಬೋಸ್ಟನ್ ಟೀ ಪಾರ್ಟಿ ಹಡಗುಗಳು ಮತ್ತು ಮ್ಯೂಸಿಯಂ, ಬೋಸ್ಟನ್ ಟೀ ಪಾರ್ಟಿ ನಡೆದ ಪ್ರದೇಶದ ಸಮೀಪದಲ್ಲಿವೆ. ಬೋಸ್ಟನ್ ಟೀ ಪಾರ್ಟಿ ಸಮಯದಲ್ಲಿದ್ದ ಎರಡು ಹಡಗುಗಳಾದ ಎಲೆನಾರ್ ಮತ್ತು ಬೀವರ್‌ಗಳ ಪ್ರತಿಕೃತಿಗಳನ್ನು ಇಂದಿಗೂ ನೋಡಬಹುದಾಗಿದೆ. ಸಾಕ್ಷ್ಯಚಿತ್ರ ಮತ್ತು ಹಲವಾರು ಸಂವಾದಾತ್ಮಕ ಪ್ರದರ್ಶನಗಳನ್ನು ಒಳಗೊಂಡಿರುವ ವಸ್ತು ಸಂಗ್ರಹಾಲಯದಲ್ಲಿ ಮೂಲ ಘಟನೆಯ ಒಂದು ಚಹಾ ಪೆಟ್ಟಿಗೆಯೂ ಇದೆ.

'ಬೋಸ್ಟನ್ ಟೀ ಪಾರ್ಟಿ ಶಿಪ್ಸ್ ಮತ್ತು ಮ್ಯೂಸಿಯಂ'ನಲ್ಲಿನ ಸುಮಾರು ಒಂದೂವರೆ ಗಂಟೆಯ ಕಾರ್ಯಕ್ರಮದಲ್ಲಿ ಡಿಸೆಂಬರ್ 16, 1773ರ ಘಟನೆಗಳನ್ನು ಪುನರಭಿನಯಿಸಿ ತೋರಿಸುತ್ತಾರೆ. ಅಂದಿನ ದಿನಗಳ ವೇಷಭೂಷಣಗಳಲ್ಲಿ ಕಾಣಿಸಿಕೊಳ್ಳುವ ನಟ–ನಟಿಯರು ನೋಡುಗರನ್ನು ಬೆರಗುಗೊಳಿಸುತ್ತಾರೆ. ಬೋಸ್ಟನ್ ಟೀ ಪಾರ್ಟಿಗೆ ಸಂಬಂಧಿಸಿದ ಸಂವಾದಾತ್ಮಕ ಪ್ರದರ್ಶನಗಳೂ ನಡೆಯುತ್ತವೆ.

ಪ್ರವಾಸಿಗರು 18ನೇ ಶತಮಾನದ ನೌಕಾಯಾನದ ಹಡಗಿನ ಪ್ರತಿಕೃತಿಯಲ್ಲಿ 'ಸನ್ಸ್ ಆಫ್ ಲಿಬರ್ಟಿ' ವೇಷಧಾರಿಗಳೊಂದಿಗೆ ಸಂವಹನ ನಡೆಸಬಹುದು. ಹಡಗಿನಲ್ಲಿ ಓಡಾಡಿ ಚಹಾ ಪೆಟ್ಟಿಗೆಗಳನ್ನು ನೀರಿಗೆಸೆದು 250 ವರ್ಷಗಳ ಹಿಂದೆ ನಡೆದ ಘಟನೆಯನ್ನು ಆನಂದಿಸಬಹುದು. ಎರಡೂವರೆ ಶತಮಾನಗಳಿಂದಲೂ ಕಾಪಾಡಿಕೊಂಡು ಬಂದಿರುವಂತಹ 'ಬೋಸ್ಟನ್ ಟೀ ಪಾರ್ಟಿ'ಯಿಂದ ಉಳಿದಿರುವಂತಹ ಏಕೈಕ ಚಹಾ ಪೆಟ್ಟಿಯನ್ನೂ ನೋಡಬಹುದು. ಅಮೆರಿಕನ್ ಕ್ರಾಂತಿಗೆ ಸಂಬಂಧಿಸಿದಂತಹ ಆಸಕ್ತಿದಾಯಕ ಸ್ಮರಣಿಕೆಗಳನ್ನು ಮ್ಯೂಸಿಯಂನ ಉಡುಗೊರೆ ಮಳಿಗೆಯಲ್ಲಿ ಖರೀದಿಸಬಹುದು.

ಪ್ರತಿಕ್ರಿಯಿಸಿ: feedback@sudha.co.in




ಚಹಾ ತೆರಿಗೆ ವಿರುದ್ಧದ ಪ್ರತಿಭಟನೆಗೆ ಸಾಕ್ಷಿಯಾಗಿರುವ 'ಬೋಸ್ಟನ್ ಟೀ ಪಾರ್ಟಿ' ಮ್ಯೂಸಿಯಂ